<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ</u>,
<u>ದಕ್ಷಿಣ ಕನ್ನಡ, ಮಂಗಳೂರು</u>.

## <u>ಸ್ಪೆಷಲ್ ಕೇಸ್ ನಂಬ್ರ 24/2015</u>

| | | | |
|---|---|---|---|
| ಸಾಕ್ಷಿದಾರರ ಹೆಸರು | | ಲೋಕಯ್ಯ ಗೌಡ ಕೆ. | <u>ಡಿ.ಡಬ್ಲ್ಯೂಃ 5</u> |
| ತಂದೆಯ ಹೆಸರು | : | ಕೃಷ್ಣಪ್ಪಗೌಡ | |
| ಪ್ರಾಯ | : | 73 ವರ್ಷ | **<u>ದಿನಾಂಕಃ 11.03.2022</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕೃಷಿ | |
| ವಾಸಸ್ಥಳ | : | ಮಂಗಳೂರು. | |

<u>ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ</u>

ನಾನು ಈಗ ಕೃಷಿ ಮಾಡುತ್ತಿದ್ದೇನೆ. ನಾನು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಸೇವೆ ಸಲ್ಲಿಸಿ, 2005 ರಲ್ಲಿ ನಿವೃತ್ತಿ ಹೊಂದಿದ್ದೇನೆ.

2. ನನಗೆ ಆರೋಪಿ ಮತ್ತು ಆತನ ಹೆಂಡತಿಯ ಪರಿಚಯ ಇದೆ. ಆರೋಪಿಗೆ ಪರೀಕ್ಷಿತ್ ಎಂಬ ಒಬ್ಬನೇ ಮಗನಿದ್ದಾನೆ. ಆತ ಎಂ.ಬಿ.ಬಿ.ಎಸ್ ಓದಿದ್ದಾನೆ. ನಾನು ಆತನ ಓದಿಗಾಗಿ ಆರೋಪಿಯ ಹೆಂಡತಿಗೆ 2009 ರಲ್ಲಿ ತಲಾ ರೂ.50,000/- ದಂತೆ ಎರಡು ಬಾರಿ, 2010 ರಲ್ಲಿ ಮೂರು ಬಾರಿ ತಲಾ ರೂ.50,000/- ಹಣವನ್ನು, ಒಂದು ಬಾರಿ ರೂ.40,000/- ಹಣವನ್ನು ಹಾಗೂ 2011 ರಲ್ಲಿ ರೂ.30,000/- ಹಣವನ್ನು ಸಾಲವಾಗಿ ನೀಡಿರುತ್ತೇನೆ. ನಾನು ಈ ಸಾಲವನ್ನು ನಗದಾಗಿ ನೀಡಿದ್ದೇನೆ.

3. 2017 ರಲ್ಲಿ ನಾನು ನನ್ನ ಮಗಳ ಮದುವೆ ಮಾಡಿದ್ದೇನೆ. ಆಗ ಆರೋಪಿಯ ಹೆಂಡತಿ ನನ್ನಿಂದ ಪಡೆದ ಎಲ್ಲಾ ಸಾಲವನ್ನು ಮರುಪಾವತಿ ಮಾಡಿದ್ದಾಳೆ.

ಈ ಕುರಿತು ನಿಡಿ.15 ರಲ್ಲಿರುವ ಪ್ರಮಾಣ ಪತ್ರವನ್ನು ಮಾಡಿರುತ್ತೇನೆ.

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

4. ನಾನು 1976 ರಿಂದ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕೆಲಸ ಮಾಡಿದ್ದೇನೆ. ಆರೋಪಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಆತನ ಪರಿಚಯ ನನಗೆ ಇತ್ತು. ನಾನು ಆರೋಪಿಯ ಹೆಂಡತಿಗೆ ಸಾಲ ನೀಡುವಾಗ ಯಾವುದೇ ದಾಖಲೆಗಳನ್ನು ಬರೆಯಿಸಿಕೊಂಡಿಲ್ಲ. ನಾನು ಮೇಲೆ ಹೇಳಿದ ಸಾಲದ ಮೊತ್ತವನ್ನು ನನಗೆ ಕೃಷಿಯಿಂದ ಬಂದ ಆದಾಯದಿಂದ ಕೊಟ್ಟಿದ್ದೇನೆ. ನನ್ನ ಜಮೀನು ವೇಣೂರಿನಲ್ಲಿ ಇದೆ. ಅಲ್ಲಿ ನನ್ನ ರೈತ ಇದ್ದಾನೆ. ಆತನಿಂದ ಒಕ್ಕಲುತನ ಮಾಡಿಸುತ್ತಿದ್ದೇನು. ನನಗೆ ಕೃಷಿಯಿಂದ ಪ್ರತಿ ವರ್ಷ ಅಂದಾಜು ಮೊದಲು ರೂ.7,50,000/- ದಿಂದ ರೂ.8,00,000/- ಆದಾಯ ಬರುತ್ತಿತ್ತು. ಈಗ ರೂ.35,00,000/- ಆದಾಯ ಬರುತ್ತಿದೆ. ನಾನು ಈ ಆದಾಯವನ್ನು ಆದಾಯ ತೆರಿಗೆ ರಿಟರ್ನ್ಸ್‌ದಲ್ಲಿ ಕಾಣಿಸಿಲ್ಲ, ಏಕೆಂದರೆ ಅದರ ಅವಶ್ಯಕತೆ ಇರುವುದಿಲ್ಲ.

5. ನನಗೆ 2017 ರಲ್ಲಿ ಸಾಲ ಮರುಪಾವತಿ ಮಾಡಿದಾಗ ಯಾವುದೇ ದಾಖಲೆಯನ್ನು ಬರೆದು ಕೊಟ್ಟಿಲ್ಲ. ನಾನು 2009 ರಿಂದ 2011 ರ ಅವಧಿಯಲ್ಲಿ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಣವನ್ನು ಸಾಲವಾಗಿ ಆರೋಪಿ ಹೆಂಡತಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸಾಲ ನೀಡಿದ್ದೇನೆ ಮತ್ತು ಮರಳಿ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

Spl.C.No.24/2015 DW-5
Date: 11.03.2022

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.

ಸಾಕ್ಷಿಯನ್ನು ದಿನಾಂಕ **16.10.2021** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಃ ಆರೋಪಿ ಪರ ವಕೀಲರಿಂದ.

.

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ.

(ವಿಶೇಷ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.